## ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ರವರ ನ್ಯಾಯಾಲಯ, ಪಾಂಡವಪುರ

**ಸಿಸಿ.ನಂ. 229/2024**

| | | | |
|---|---|---|---|
| ಸಾಕ್ಷಿದಾರರು | : | ಲಕ್ಷ್ಮಮ್ಮ | ಸಿ.ಡಬ್ಲ್ಯೂ : 4 |
| ಗಂಡನ ಹೆಸರು | : | ಲೇಟ್ ದೊಡ್ಡಕರೀಗೌಡ | ಪಿ.ಡಬ್ಲ್ಯೂ : 7 |
| ವಯಸ್ಸು | : | 90 ವರ್ಷ | |
| ವೃತ್ತಿ | : | ಗೃಹಿಣಿ | |
| ವಾಸ ಸ್ಥಳ | : | ಗಿರಿಯಾರಹಳ್ಳಿ ಗ್ರಾಮ | |

**ಸಾಕ್ಷಿಯನ್ನು ದಿಃ 05.08.2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಎ ಪಿ ಪಿ ರವರಿಂದಃ**

1. ಆರೋಪಿಗಳು ಎಲ್ಲರು ನಮ್ಮ ಊರಿನವರು. ಚಾಸಾ.1 ನನ್ನ ಮಗ. ನಾನು ಮತ್ತು ನನ್ನ ಮಗ ಅಂಕನಹಳ್ಳಿ ಗ್ರಾಮದ ಸರ್ವೆ ನಂಃ 86 ರಲ್ಲಿ 8 ಎಕರೆ ಜಮೀನಿನಲ್ಲಿ ಸ್ವಾಧೀನ ಹೊಂದಿರುತ್ತೇವೆ. ಈಗ್ಗೆ ಎರಡು ವರ್ಷಗಳ ಹಿಂದೆ ನಮ್ಮ ಭೂಮಿಯನ್ನು ಆರೋಪಿಗಳು ತಮಗೆ ಬರಬೇಕೆಂದು ಬಂದು ಕುಡ್ಲು, ಕೊಡಲಿ ತೆಗೆದುಕೊಂಡು ಬಂದಿದ್ದರು. ಪೊಲೀಸರು ನನ್ನನ್ನು ವಿಚಾರಣೆ ಮಾಡಿರುತ್ತಾರೆ. ಘಟನೆಗೆ ಸಂಬಂಧಿಸಿದಂತೆ ನಾನು ಪೊಲೀಸರಿಗೆ ಹೇಳಿಕೆ ಕೊಟ್ಟಿದ್ದೇನೆ.

**(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀಸವಾಲು ಮಾಡಲು ಎಪಿಪಿ ರವರು ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು.)**

**ಪಾಟೀ ಸವಾಲುಃ ಎಪಿಪಿ ರವರಿಂದಃ**

2. ದಿಃ 02.06.2024 ರಂದು ಮಧ್ಯಾಹ್ನ 3 ಗಂಟೆ ಸಮಯದಲ್ಲಿ ಚಾಸಾ.1 ರವರು ಜೆ ಸಿ ಬಿ ತೆಗೆದುಕೊಂಡು ಹೋಗಿ ಅದರ ಆಪರೇಟರ್ ಅಭಿಲಾಷ್ ರವರ ಕಡೆಯಿಂದ ಜಮೀನಿನಲ್ಲಿ

ಬದು ಹಾಕಿಸುವಾಗ ಆರೋಪಿಗಳು ಎಲ್ಲರು ಗುಂಪು ಕಟ್ಟಿಕೊಂಡು ಬಂದು ಅತಿಕ್ರಮ ಪ್ರವೇಶ ಮಾಡಿ ಕೆಲಸ ಮಾಡದ ಹಾಗೆ ತಡೆದರು ಎಂದರೆ ಸರಿ. 1 ನೇ ಆರೋಪಿ ಚಾಸಾ.1 ರವರನ್ನು ಉದ್ದೇಶಿಸಿ ಅವಾಚ್ಯ ಶಬ್ದಗಳಿಂದ ಬೈದರು ಎಂದರೆ ಸರಿ. 1 ನೇ ಆರೋಪಿ ಈ ಜಮೀನುನಮಗೆ ಸೇರಬೇಕು ಮಟ್ಟ ಏಕೆ ಮಾಡಿಸುತಿಸದ್ದೀರಾ ಎಂದುದ ದೊಣ್ಣೆಯಿಂದ ಹೊಡೆಯಲು ಯತ್ನಿಸಿದರು ಎಂದರೆ ಸರಿ. 2 ಮತ್ತು 3 ನೇ ಆರೋಪಿಗಳು ಕೆಲಸ ಮುಂದುವರಿಸಿದರೆ ಚಾಸಾ.1 ರವರನ್ನು ಸಾಯಿಸುವುದಾಗಿ ಕೊಲೆ ಬೆದರಿಕೆ ಹಾಕಿದರು ಎಂದರೆ ಸರಿ. ಚಾಸಾ.2 ರವರು ಬಂದು ಆ ಜಗಳವನ್ನು ಬಿಡಿಸಿದರು ಎಂದರೆ ಸರಿ. ದೊಣ್ಣೆ ಮತ್ತು ಕುಡುಗೋಲನ್ನು ಆರೋಪಿಗಳು ಅಲ್ಲೆ ಬಿಸಾಡಿ ಹೋದರು ಎಂದರೆ ಸರಿ. ದಿಃ 14.06.2024 ರಂದು ಚಾಸಾ.1 ರವರು ಆರೋಪಿಗಳ ವಿರುದ್ಧ ದೂರು ನೀಡಿದ್ದರು ಎಂದರೆ ಸರಿ. ಸರ್ವೆ ನಂ 86 ರ ಜಮೀನನ್ನು ಆರೋಪಿಗಳು ಉಳುಮೆ ಮಾಡಿದ್ದರು ಎಂದರೆ ಸರಿ. 8 ನೇ ಆರೋಪಿಯು ಸರ್ವೆ ನಂಃ 86 ರ ಜಮೀನನ್ನು ಅಕ್ರಮವಾಗಿ ಅಕ್ರಮವಾಗಿ ಉಳುಮೆ ಮಾಡುತ್ತಿದ್ದರು ಎಂದರೆ ಸರಿ. ಚಾಸಾ.1 ರವರು 8 ನೇ ಆರೋಪಿಯನ್ನು ಏಕೆ ಉಳುಮೆ ಮಾಡುತ್ತಿದ್ದೀಯಾ ಎಂದು ಕೇಳಿದಾಗ 8 ನೇ ಆರೋಪಿ ಅವಾಚ್ಯ ಶಬ್ದಗಳಿಂದ ಬೈಂದು ಪ್ರಾಣ ಬೆದರಿಕೆ ಹಾಕಿದರು ಎಂದರೆ ಸರಿ. ದಿಃ 17.06.2024 ರಂದು ಈ ಘಟನೆ ಕುರಿತಾಗಿ ಪೊಲೀಸರ ಮುಂದೆ ವಿವರವಾದ ಹೇಳಿಕೆ ನೀಡಿರುತ್ತೀರಾ ಎಂದರೆ ಸರಿ.

***<u>ಪಾಟೀ ಸವಾಲುಃ 1 ರಿಂದ 8 ನೇ ಆರೋಪಿಗಳ ಪರ ವಕೀಲರಿಂದಃ</u>***

3. ಚಾಸಾ.1 ನನ್ನ ಹಿರಿ ಮಗ. ಚಾಸಾ.1 ರವರು ಪಾಂಡವಪುರದಲ್ಲಿ ಸುಮಾರು 20 ವರ್ಷಗಳಿಂದ ವಾಸ ಇದ್ದಾರೆ. ಚಾಸಾ.1 ರವರು ಹಾರೋಹಳ್ಳಿಯಲ್ಲಿ ಸುಮಾರು 30 ವರ್ಷಗಳಿಂದ ವಾಸ

*ಇದ್ದಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಈಗ್ಗೆ ಎರಡು ವರ್ಷಗಳಿಂದ ನಾನು ಚಾಸಾ.1 ರವರ ಮನೆಯಲ್ಲಿ ಆರೋಗ್ಯ ಸರಿ ಇಲ್ಲದೆ ಇರುವ ಕಾರಣ ವಾಸ ಮಾಡುತ್ತಿದ್ದೇನೆ. ಆರೋಪಿಗಳ ವೈಯಕ್ತಿಕ ಹೆಸರುಗಳನ್ನು ಹೇಳಲಾಗುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಸ್ವತಃ ನಮ್ಮ ಊರಿನವರೇ ಹಾಗೂ ನಮ್ಮ ಹೊಲದ ಅಕ್ಕಪಕ್ಕದವರು ಎಂದು ಹೇಳುತ್ತಾರೆ. ನನ್ನ ಹೆಸರಿನಲ್ಲಿ ಆರು ಎಕೆರ ಜಮೀನು ಇದೆ, ಚಾಸಾ.1 ರವರ ಹೆಸರಿನಲ್ಲಿ ಎರಡು ಎಕರೆ ಜಮೀನಿದೆ. ಕಂದಾಯ ದಾಖಲೆಗಳನ್ನು ನ್ಯಾಯಾಲಯಕ್ಕೆ ಕೊಟ್ಟಿದೆಯೋ ಇಲ್ಲವೋ ಗೊತ್ತಿಲ್ಲ. ಆ ಆಸ್ತಿ ನಿಮಗೆ ಹೇಗೆ ಬಂತು ಎಂದರೆ ಸಾಕ್ಷಿ ದರ್ಖಾಸ್ತುನಲ್ಲಿ ಬಂತು ಎಂದು ಹೇಳುತ್ತಾರೆ. ಘಟನೆಯ ವಿಚಾರಗಳನ್ನು ನನಗೆ ಯಾರು ಹೇಳಿಲ್ಲ. ನಾನು ಯಾರ ಮುಂದೆಯೂ ಈ ಮೊದಲು ಹೇಳಿಲ್ಲ.*

***ಮರು ವಿಚಾರಣೆ ಇಲ್ಲ.***

***(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ).***

***ಸಾ.ಓ.ಹೇ.ಕೆ.ಸ.ಇ.***

***ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು***
***ಜೆ.ಎಂ.ಎಫ್.ಸಿ., ಪಾಂಡವಪುರ.***